# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 984 |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2024 ರ ಜೂನ್ ತಿಂಗಳಲ್ಲಿ ನಡೆದ ಸಂಪುಟ ಸಭೆಯ ನಿರ್ಣಯದಂತೆ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುಸನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ವಸತಿ ಯೋಜನೆಯಲ್ಲಿ ಕುಸನೂರು ಗ್ರಾಮದ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ವಸತಿ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ ಹಾಗೂ ಈ ಯೋಜನೆಗಳಿಗೆ ಸರ್ಕಾರ ಮೀಸಲಿಟ್ಟ ಅನುದಾನ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕುಸನೂರು ಗ್ರಾಮದ ಸರ್ವೆ ನಂ. 123/ಅ, 123/ಆ, 128/1, 128/2, 129, 130/1, 130/2, 130/3, 131/1, 131/2, 131/3, 131/4, 131/5, 131/8, 131/10, 131/11 ಮತ್ತು 131/12 ಗಳಲ್ಲಿ ಒಟ್ಟು 90ಎಕರೆ-17ಗುಂಟೆ ವಿಸ್ತೀರ್ಣದಲ್ಲಿ ವಸತಿ ಯೋಜನೆಯನ್ನು ರಚಿಸಲಾಗಿದೆ.<br><br>ಸದರಿ ವಸತಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 02 ಗುಅಪ್ರಾ 2016, ದಿನಾಂಕ:24.01.2019 ರ ಪ್ರಕಾರ ರೂ.94.80 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.<br><br>ಪ್ರಸ್ತುತ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರವು 2021-22 ನೇ ಸಾಲಿನ ಏಕರೂಪ ದರಪಟ್ಟಿ ಮತ್ತು ಶೇ.18 ರಷ್ಟು ಜಿ.ಎಸ್.ಟಿ. ತೆರಿಗೆಯನ್ನು ಅಳವಡಿಸಿಕೊಂಡು ಸಲ್ಲಿಸಿರುವ ಪರಿಷ್ಕೃತ ಮೊತ್ತ ರೂ.122.40 ಕೋಟಿಗಳಿಗೆ (ಒಂದು ನೂರಾ ಇಪ್ಪತ್ತೆರಡು ಕೋಟಿ ನಲವತ್ತು ಲಕ್ಷಗಳು) ಸರ್ಕಾರದ ಆದೇಶ ಸಂಖ್ಯೆ: ನಅಇ 223 ಗುಅಪ್ರಾ 2022 (ಇ), ದಿನಾಂಕ:25.06.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಆ) | ಕಲಬುರಗಿ ನಗರದ ಕುಸನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ. 194/1 ರಲ್ಲಿನ ನಿವೇಶನಗಳು ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುತ್ತವೆಯೇ; ಈ ನಿವೇಶನಗಳು 2000-2001 ರಲ್ಲಿ ರಾಜ್ಯ ಸರ್ಕಾರಿ | ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಗುಲಬರ್ಗಾದಿಂದ ಹಂಚಿಕೆಯಾಗಿರುವ ನಿವೇಶನಗಳು ಸರ್ವೆ ನಂಬರ್ 176/2 ರಲ್ಲಿ ಇರುತ್ತದೆ. 194/1 ರಲ್ಲಿ ಯಾವುದೇ ನಿವೇಶನಗಳು ಇರುವುದಿಲ್ಲ.<br><br>ಆಯುಕ್ತರು, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ ರವರ ಪತ್ರ ಸಂಖ್ಯೆ: ನಪ್ರಾಕ / |

| | | |
|---|---|---|
| | ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಗುಲ್ಬರ್ಗಾದಿಂದ ಹಂಚಿಕೆಯಾಗಿದ್ದ, ಕಳೆದ 6-7 ವರ್ಷಗಳಿಂದ ಈ ನಿವೇಶನಗಳಿಗೆ ತೆರಿಗೆ ಕಟ್ಟಿಸಿಕೊಳ್ಳದಿರಲು ಕಾರಣವೇನು; (ವಿವರ ನೀಡುವುದು) | ನ.ಯೋ.ಸ /ಅನಧಿಕೃತ 2 / 2019-20 / 420, ದಿನಾಂಕ:06.07.2019 ರಂತೆ ಸರ್ವೆ ನಂ. 194/1 ರಲ್ಲಿ ನಿಯಮಬಾಹಿರವಾಗಿ ಉದ್ಯಾನವನದ ಜಾಗದಲ್ಲಿ ಹೆಚ್ಚುವರಿ ನಿವೇಶನಗಳನ್ನು ಅಳವಡಿಸಿ ನೀಡಲಾಗಿರುವ ವಿನ್ಯಾಸ ನಕ್ಷೆಯನ್ನು ಹಾಗೂ ಈ ಜಮೀನಿನಲ್ಲಿ ಕಾನೂನು ಬಾಹಿರವಾಗಿ ರಚಿಸಲಾಗಿರುವ ನಿವೇಶನಗಳ ಖಾತೆಗಳನ್ನು ಸಹ ರದ್ದುಪಡಿಸಲು ಆದೇಶಿಸಿರುವುದರಿಂದ ಕಳೆದ 6-7 ವರ್ಷಗಳಿಂದ ಈ ನಿವೇಶನಗಳಿಗೆ ಯಾವುದೇ ತೆರಿಗೆಯನ್ನು ಪಾವತಿಸಿಕೊಂಡಿರುವುದಿಲ್ಲ. |
| ಇ) | ಸರ್ವೆ ನಂ. 194/1ರ ನಿವೇಶನಗಳು ಸರ್ಕಾರದಿಂದ / ಸಂಘದಿಂದ ಹಂಚಿಕೆಯಾಗಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಪ್ರಸ್ತುತ ಈ ನಿವೇಶನಗಳು ಗಾರ್ಡನ್ ಜಾಗವೆಂದು ತಿಳಿಸುತ್ತಿದ್ದರಿಂದ ನಿವೇಶನದ ಖರೀದಿದಾರರು ಆಂತಕಕ್ಕೆ ಒಳಗಾಗುತ್ತಿರುವುದು ನಿಜವೇ; | ಕುಸನೂರು ಗ್ರಾಮದ ಸ.ನಂ. 194/1 ರಲ್ಲಿ ದಿನಾಂಕ:22.09.1988 ರಂದು ನಗರ ಯೋಜನಾ ನಿರ್ದೇಶಕರು, ರವರಿಂದ ವಸತಿ ವಿನ್ಯಾಸ ಅನುಮೋದಿಸಲಾಗಿದೆ.<br><br>ಸದರಿ ವಿನ್ಯಾಸದಲ್ಲಿ ಗಾರ್ಡನ್‌ಗಾಗಿ ಶೇ. 10.20 ಜಾಗ ಮೀಸಲಿಡಲಾಗಿದೆ. ಸದರಿ ಗಾರ್ಡನ್‌ಗಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ನಿವೇಶನಗಳನ್ನು ರಚಿಸಲು / ಇತರೆ ಅಭಿವೃದ್ಧಿಗೆ ಅವಕಾಶವಿರುವುದಿಲ್ಲ. |
| ಈ) | ಈ ಸಮಸ್ಯೆಯನ್ನು ಬಗೆಹರಿಸಿ ಪರ್ಯಾಯವಾಗಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು; ಯಾವ ಕಾಲಮಿತಿಯಲ್ಲಿ ಇತ್ಯರ್ಥಪಡಿಸಲಾಗುವುದು? (ಮಾಹಿತಿಯನ್ನು ಒದಗಿಸುವುದು) | |

ಸಂಖ್ಯೆ : ನಅಇ 219 ಗುಅಪ್ರಾ 2024

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು